# ಬಿ.ಎ.

## (ಐಚ್ಛಿಕ ಕನ್ನಡ,ಪತ್ರಿಕೋದ್ಯಮ,ಸಮಾಜಶಾಸ್ತ್ರ)

# Opt.kannada,Journalism,Sociology

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ೨೦೦೦ ವರ್ಷಗಳ ಇತಿಹಾಸವಿದೆ.ಪ್ರಾಚೀನವಾದ ಕನ್ನಡ ಭಾಷೆಯನ್ನು ಭಾರತಸರ್ಕಾರ 'ಶಾಸ್ತ್ರೀಯ ಭಾಷೆ' ಎಂದು ಪರಿಗಣಿಸಿ ಗೌರವಿಸಿದೆ. ಪ್ರಾಚೀನ ಇತಿಹಾಸವಿರುವ ಕನ್ನಡ ಭಾಷೆ ಹಲವು ಬದಲಾವಣೆಗಳೊಂದಿಗೆ ಬೆಳೆದುಬಂದಿದೆ. ಹೀಗೆ ಬೆಳೆದುಬಂದಿರುವ ಭಾಷೆ ಮತ್ತು ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡುವುದು ಈ ಸಂಯೋಜನೆಯ ಉದ್ಧೇಶವಾಗಿದೆ. ಇದರೊಂದಿಗೆ ಪತ್ರಿಕೋದ್ಯಮ,ಸಮಾಜಶಾಸ್ತ್ರವನ್ನು ಅಧ್ಯಯನ ಮಾಡಲಾಗುತ್ತದೆ. ಇವತ್ತಿನ ದಿನಗಳಲ್ಲಿ ಮಾಧ್ಯಮ ಹೆಚ್ಚು ಬಲಿಷ್ಠ. ಇದರಿಂದ ಅವಕಾಶಗಳೂ ಹೆಚ್ಚು. ಇವೆರಡರ ಅವಶ್ಯಕತೆ ಸಮಾಜಕ್ಕೆ ಅನಿವಾರ್ಯ. ಇದರ ಮೂಲಕ ಐಚ್ಛಿಕ ಕನ್ನಡ,ಪತ್ರಿಕೋದ್ಯಮ,ಸಮಾಜಶಾಸ್ತ್ರ ವಿಷಯ ಸಂಯೋಜನೆಯಲ್ಲಿ ವಿದ್ಯಾಭ್ಯಾಸ ಮಾಡಿ ಮುಗಿಸುವ ವಿದ್ಯಾರ್ಥಿಗಳಿಗೆ ಸಮಾಜದಲ್ಲಿ ಹೆಚ್ಚು ಹೆಚ್ಚು ಅವಕಾಶಗಳು ಇದೆ.

**ಅವಧಿ:** ಮೂರು ವರ್ಷಗಳು ( ಆರು ಸೆಮಿಸ್ಟರ್‌ಗಳು)

**ಅರ್ಹತೆ:** ೧೦ + ೨ ಉತ್ತೀರ್ಣರಾಗಿರಬೇಕು ( ಪಿ.ಯು.ಸಿ.ತೇರ್ಗಡೆಹೊಂದಿರಬೇಕು)

**ಉದ್ಯೋಗಾವಕಾಶಗಳು**:

ಈ ಪದವಿ ಮುಗಿದ ಮೇಲೆ ಓದನ್ನು ಮುಂದುವರಿಸುವುದಾದರೆ ಕನ್ನಡ, ಪತ್ರಿಕೋದ್ಯಮ ಮತ್ತು ಸಮಾಜಶಾಸ್ತ್ರ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ( ಎಂ.ಎ.,) ಬಿಇಡಿ ಪದವಿ ಮಾಡಬಹುದು.

ನಂತರದಲ್ಲಿ ಪಿಎಚ್ ಡಿ ಪದವಿ ಮಾಡುವ ಅವಕಾಶವಿದೆ.ಪದವಿ,ಪದವಿ ಪೂರ್ವ ಕಾಲೇಜುಗಳಲ್ಲಿ ಅಧ್ಯಾಪಕರಾಗಲು ಅವಕಾಶವಿದೆ.

ಯುಪಿಎಸ್ ಸಿ ಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸುಗಳಿಸಲು ಸುಲಭಸಾಧ್ಯ.

ಪತ್ರಿಕೋದ್ಯಮದಲ್ಲಿ ,ಸರ್ಕಾರಿ ಉದ್ಯೋಗಗಳನ್ನು ಪಡೆಯಬಹುದು.